<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 445/2015
CW- 6 PW-5

ಹೆಸರು : ರಾಮು

ತಂದೆಯ ಹೆಸರು: ಬೋಮು

ವಯಸ್ಸು : 54 ವರ್ಷ

ಉದ್ಯೋಗ : ಎ.ಎಸ್.ಐ.

ವಾಸ ಸ್ಥಳ : ಫರ್ತಾಬಾದ್

---

<u>ಪ್ರಮಾಣವಚನ ಭೋಧಿಸಲಾಯಿತು. ದಿಃ 16-12-2025</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2015 ರಿಂದ 2020ರವರೆಗೆ ಮಾಡಬೂಳ್ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 20.06.2015ರಂದು ಬೆಳಿಗ್ಗೆ ಪೋಲೀಸ್ ಠಾಣೆಯಲ್ಲಿದ್ದಾಗ ಚಾಸಾ-1ರವರು ಕರೆದು ಬಾತ್ಮಿ ವಿಚಾರ ತಿಳಿಸಿದರು. ನಾನು, ಚಾಸಾ-1 ಮತ್ತು 7ರವರು ಸೇರಿ ಇಲಾಖಾ ವಾಹನದಲ್ಲಿ ಬಾತ್ಮಿ ಬಂದ ಬೆಳಗುಂಪ ಕ್ರಾಸ್ ಬಳಿ ತಲುಪಿರುತ್ತೇವೆ. ನಾವು ಅಲ್ಲಿ ತಲುಪಿ ನೋಡುತ್ತಿದ್ದಾಗ ಬಾಗೋಡಿ ಕಡೆಯಿಂದ ಒಂದು ಟ್ರ್ಯಾಕ್ಟರ್ ಬರುತ್ತಿತ್ತು. ಅದರಲ್ಲಿ ಇಬ್ಬರು ಜನ ಇದ್ದರು. ಆಗ ಚಾಸಾ-1ರವರು ಸದರಿ ಗಾಡಿಯನ್ನು ತಡೆದು ನಿಲ್ಲಿಸಿದರು. ಆಗ ಒಬ್ಬ ವ್ಯಕ್ತಿ ಓಡಿ ಹೋಗಿರುತ್ತಾನೆ, ಟ್ರ್ಯಾಕ್ಟರ್ ಚಾಲಕನನ್ನು ನಾವು ಹಿಡಿದುಕೊಂಡಿರುತ್ತೇವೆ. ಆತನಿಗೆ ಹೆಸರು ವಿಳಾಸ ಕೇಳಲಾಗಿ ಆತ ತನ್ನ ಹೆಸರು ಜಯಭೀಮ್ ಕುರಿ ಸಾಕಿನ್ ಮುಗುಟ ಎಂದು ತಿಳಿಸಿದನು. ನಂತರ ನಾವು ಟ್ರ್ಯಾಕ್ಟರ್ ನ್ನು ಪರಿಶೀಲನೆ ಮಾಡಿ ನೋಡಿದಾಗ ಅದರ ಟ್ರಾಲಿಯಲ್ಲಿ ಮರಳು ತುಂಬಿದ್ದು ಕಂಡು ಬಂತು. ಸದರಿ ಮರಳನ್ನು ಎಲ್ಲಿಂದ ತಂದಿದ್ದೀಯಾ ಮತ್ತು ಸದರಿ ಮರಳನ್ನು ಸಾಗಾಟ ಮಾಡಲು ಪರವಾನಿಗೆ ಇದೆಯಾ ಎಂದು ಕೇಳಲಾಗಿ ಆರೋಪಿತ ಸದರಿ ಮರಳನ್ನು ಕಾಗಿನ ಹಳ್ಳದಿಂದ ಕಳ್ಳತನದಿಂದ ತುಂಬಿಕೊಂಡು ಬಂದಿದ್ದು ಅದಕ್ಕೆ ಯಾವುದೇ ಪರವಾನಿಗೆ ಇಲ್ಲ ಎಂದು ಹೇಳಿರುತ್ತಾನೆ. ನಂತರ ಚಾಸಾ-1ರವರು ಆರೋಪಿತನ

ಸಹಾಯದಿಂದಲೇ ಸದರಿ ಟ್ರ್ಯಾಕ್ಟರ್ ಮತ್ತು ಟ್ರಾಲಿಯನ್ನು ನಮ್ಮ ಪೋಲೀಸ್ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ನಂತರ ಚಾಸಾ-1ರವರು ಜಪ್ತುಪಡಿಸಿಕೊಂಡ ಟ್ರ್ಯಾಕ್ಟರನ್ನು ಚಾಸಾ-8 ರವರಿಗೆ ಹಸ್ತಾಂತರಿಸಿರುತ್ತಾರೆ. ಸದರಿ ಟ್ರ್ಯಾಕ್ಟರ್ ನ ನೋಂದಣಿ ಸಂಖ್ಯೆ KA-33-T-3426 ಆಗಿದ್ದು ಟ್ರಾಲಿ ಸಂಖ್ಯೆ KA-32-T-5913 ಆಗಿತ್ತು.

ಚಾಸಾ-1ರವರು ಸ್ವ ದೂರು ನೀಡಿದ ನಂತರ ನಾನು ತೋರಿಸಿದ ಗುನ್ಹಾ ಸ್ಥಳದ ಪಂಚನಾಮೆಯನ್ನು ಚಾಸಾ-8ರವರು ಚಾಸಾ-2 ಮತ್ತು 3ರವರ ಸಮಕ್ಷಮ ಜರುಗಿಸಿರುತ್ತಾರೆ. 1ನೇ ಆರೋಪಿತನು ಓಡಿ ಹೋದ ವ್ಯಕ್ತಿ ರವಿ ಆಗಿದ್ದು ಆತ 2ನೇ ಆರೋಪಿತ ಎಂದು ನಮಗೆ ತಿಳಿಸಿರುತ್ತಾರೆ. ನಾನು ಘಟನೆ ಕುರಿತು ಚಾಸಾ-8ರವರಿಗೆ ಹೇಳಿಕೆ ನೀಡಿರುತ್ತೇನೆ. ನಾನು 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 1ನೇ ಆರೋಪಿತ ಇಂದು ಗೈರು ಹಾಜರಿದ್ದು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ವಿನಾಯಿತಿ ಅರ್ಜಿ ಸಲ್ಲಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ. ಎಮ್.ಎಸ್.ಎಸ್. ವಕೀಲರಿಂದ -</u>

ಮಾಡಬೂಳ್ ದಿಂದ ಭಾಗೋಡಿ ಗ್ರಾಮವು ಸುಮಾರು 7 ಕಿ.ಮೀ. ದೂರದಲ್ಲಿದೆ. ನಾವು ಪೋಲೀಸ್ ಠಾಣೆಯಿಂದ ಬೆಳಗ್ಗೆ 09.15ಕ್ಕೆ ಬಿಟ್ಟು 09.30 ಗಂಟೆಗೆ ಬಾತ್ಮಿ ಬಂದ ಸ್ಥಳಕ್ಕೆ ತಲುಪಿರುತ್ತೇವೆ. ನೀವು ನಿಂತಾಗ ಒಂದು ಟ್ರ್ಯಾಕ್ಟರ್ ಬಂತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಟ್ರ್ಯಾಕ್ಟರ್ ನಲ್ಲಿದ್ದ ಒಬ್ಬ ವ್ಯಕ್ತಿ ಓಡಿ ಹೋಗಿದ್ದು ಸದರಿ ವಾಹನದ ಚಾಲಕನ ಹೆಸರು ಜಯಭೀಮ್ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ನಿಲ್ಲಿಸಿದ್ದೀರಿ ಎನ್ನುವ ವಾಹನದಲ್ಲಿ ಯಾವುದೇ ಮರಳು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ 1ನೇ ಆರೋಪಿತನು ಚಾಸಾ-1ರವರು ಹೇಳಿದಂತೆ ಟ್ರ್ಯಾಕ್ಟರನ್ನು ಪೋಲೀಸ್ ಠಾಣೆಗೆ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ-1ರವರು ಯಾವುದೇ ವಾಹನವನ್ನು ಜಪ್ತುಪಡಿಸಿಕೊಂಡು ಚಾಸಾ-8ರವರಿಗೆ ಹಸ್ತಾಂತರ ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಸ್ಥಳವನ್ನು ತೋರಿಸಿಲ್ಲ ಮತ್ತು ಚಾಸಾ-8ರವರು ಯಾವುದೇ ಸ್ಥಳ ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿತ 2ನೇ ಆರೋಪಿತನ ಹೆಸರನ್ನು ಎಂದಿಗೂ ಹೇಳಿಲ್ಲ ಎಂದರೆ ಸರಿಯಲ್ಲ. ನೀವು ನಿಮ್ಮ ಮೇಲಧಿಕಾರಿಗಳ ಮಾತು ಕೇಳಿ ಪೋಲೀಸ್ ಠಾಣೆಯ ಅಂಕೆ ಸಂಖ್ಯೆಗೋಸ್ಕರ ಮಾಡಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು

ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಗುನ್ಹೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.